ಓ ಎಸ್. ನಂ.71/2024
ಪಿ.ಡಬ್ಲ್ಯೂ : 1

**<u>ದಿನಾಂಕಃ 18.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪಿ.ಡಬ್ಲೂ-1 ಎಂದು ಪರಿಗಣಿಸಲಾಯಿತು.**

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಂದಾಯಿತ ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ಕ್ಕೆ ನಾನು, ಪ್ರತಿವಾದಿ ಸಹಿ ಮಾಡಿರುತ್ತೇವೆ ಎಂದು ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ನಿಪಿ 1(ಎ) ಮತ್ತು ಪ್ರತಿವಾದಿಗಳಾದ ರಾಮಕೃಷ್ಣನ ಸಹಿಯನ್ನು ಮಾಡಿದ್ದು, ಸದರಿ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸೌಭಾಗ್ಯ ಇವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಾನು ಮತ್ತು ಪ್ರತಿವಾದಿಯರು ಐದು ಕಡೆಗಳಲ್ಲಿ ಸಹಿಗಳನ್ನು ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ಹಾಕಿರುತ್ತೇವೆ. ಅದೇ ರೀತಿ ಸಾಕ್ಷಿದಾರರಾದ ಮಲ್ಲಣ್ಣ, ವೆಂಕಟಕೃಷ್ಣ, ಮಹಾದೇವಪ್ಪ, ಹಳೆಪ್ಪ ಇವರ ಪೈಕಿ ಮೂರು ಜನ ಸಾಕ್ಷಿದಾರರು ಸಹಿ ಮಾಡಿದ್ದು, ಒಬ್ಬ ಸಾಕ್ಷಿದಾರರು ಹೆಬ್ಬೆಟಿನ ಗುರುತನ್ನು ಹಾಕಿರುತ್ತಾರೆ. ಸದರಿಯವರ ಸಹಿಗಳನ್ನು ನಿಪಿ 1(ಸಿ) ಯಿಂದ (ಇ) ಎಂದು ಗುರುತಿಸಲಾಯಿತು. ಸದರಿ ನಿಪಿ 1 ನ್ನು ಬರೆದವರು ಮಲ್ಲಿಕಾರ್ಜುನ ಗುಳಗಿ ಎನ್ನುವವರು ಬರೆದಿರುತ್ತಾರೆ. ಸದರಿಯವರ ಸಹಿಯನ್ನು ನಿಪಿ 1(ಎಫ್) ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದ ಗಣಕೀಕೃತ ಪಹಣಿಯನ್ನು ನಿಪಿ 2 ಎಂದು, ದಿನಾಂಕ 07.03.2024 ರಂದು ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ 3 ಎಂದು, ಎರಡು ಅಂಚೆ ರಶೀದಿಗಳನ್ನು ಒಟ್ಟಾರೆಯಾಗಿ ನಿಪಿ 4 ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ದಾವೆಯಲ್ಲಿ ಕೋರಿದಂತೆ ಡಿಕ್ರಿ ಮಾಡಬೇಕಾಗಿ ವಿನಂತಿ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)</u>**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.